ತೆಗೆದುಕೊಂಡಿರತಕ್ಕಂಥ ನಿಲುವು ಸರಿಯಾದ ನಿಲುವಲ್ಲ. ಆಂಧ್ರಪ್ರದೇಶದ ಸರ್ಕಾರದ ಅನ್ಯಾಯ, ಆಂಧ್ರಪ್ರದೇಶ ಶಾಸನಸಭೆಯಲ್ಲಿ ನಡೆಯುತ್ತಿರತಕ್ಕಂಥ ಇದೊಂದು ಮೋಸ, ಇದು ಕರ್ನಾಟಕ ಜನತೆಗೆ ನಿಜವಾಗಿ ಮಾಡತಕ್ಕಂಥ ಅತ್ಯಂಥ ಅಪಚಾರ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಆಂಧ್ರಪ್ರದೇಶದ ಸರ್ಕಾರವು ತೆಲಗುಗಂಗಾಗೆ ಸಂಬಂಧಿಸಿದಂತೆ ಈ ನೀತಿಯನ್ನು ತಂದಿದ್ದಾಗ ಕರ್ನಾಟಕದ ಸರ್ಕಾರವು ಕಣ್ಣುಮುಚ್ಚಿಕೊಂಡು ಕುಳಿತಿರುವ ನೀತಿಯು ಸರಿಯಲ್ಲವೆಂದು ಈ ನೀತಿಯನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷರು:- ಊಟದ ಸಮಯವಾಗಿದೆ ತಾವು ಸಂಕ್ಷಿಪ್ತವಾಗಿ ಹೇಳಿ.

+ ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೆಪಲ್ಲಿ):- ಸನ್ಮಾನ್ಯ ಅಧ್ಯಕ್ಷರೆ, ಜುರಾಲದ ಬಗ್ಗೆ ಸಾಕಷ್ಟು ವಿಷಯಗಳನ್ನು ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ್ದಾರೆ. ಇದರಲ್ಲಿ ಮುಖ್ಯವಾಗಿರತಕ್ಕಂಥ ಎರಡು ಅಂಶಗಳೇನೆಂದರೆ, ಜುರಾಲಾ ಆಣೆಕಟ್ಟೆಯಿಂದಾಗಿ ಮುಳುಗಡೆಯಾಗಿರತಕ್ಕಂಥ ಪ್ರದೇಶಗಳ ಬಗ್ಗೆ ಚರ್ಚಾಸ್ಪದವಾಗಿದೆ. ಸರ್ಕಾರ ಹೇಳುತ್ತಿರತಕ್ಕಂಥದ್ದು, 576 ಎಕರೆ ಜಮೀನು ಮಾತ್ರ ಮುಳುಗಡೆಯಗುತ್ತಿದೆ. ಆದರೆ ಅಲ್ಲಿ ವಾಸ್ತವವಾಗಿರುತಕ್ಕಂಥ ಪರಿಸ್ಥಿತಿ, ರಾಯಚೂರು ಜಿಲ್ಲೆಯ ಜನರು, ಈ 576 ಎಕರೆ ಜಮೀನು ಮುಳುಗಡೆಯಾಗುತ್ತಿದೆ ಎಂದು ಸರ್ಕಾರ ಏನು ಹೇಳುತ್ತಿದೆ ಇದು ಸತ್ಯಕ್ಕೆ ದೂರವಾದಂಥ ವಿಷಯ. ಕನಿಷ್ಟ ಎಂದರೂ 2,000 ಎಕ್ಕರೆಯಷ್ಟು ಜಮೀನು ಮುಳುಗಡೆಯಾಗುತ್ತದೆ ಎಂದು ಹೇಳುತ್ತಿದ್ದಾರೆ. ಹೀಗೆ ಮುಳುಗಡೆಯಾಗತಕ್ಕಂಥ ಭೂಮಿಯಲ್ಲಿ ಕೃಷಿ ಭೂಮಿಯು ಇದೆ, ಕೃಷಿಯೇತರ ಭೂಮಿಯು ಇದೆ. ಕೃಷಿ ಭೂಮಿ ಎಂದರೆ, ಅಲ್ಲಿ ಈಗ ಮುಳುಗಡೆಗೆ ಒಳಗಾಗಿರತಕ್ಕಂಥ, ಸಣ್ಣ ಸಣ್ಣ ದ್ವೀಪಗಳಲ್ಲಿರತಕ್ಕಂಥ ರೈತರು ಏನಿದ್ದಾರೆ ಅವರ ಭೂಮಿ ಮುಳುಗಡೆಯಾಗುತ್ತಿದೆ. ಅದರ ಬಗ್ಗೆ ನಿಖರವಾದಂಥ ಅಂದರೆ ಈ ಮುಳುಗಡೆಯಾಗುತ್ತಿರತಕ್ಕಂಥ ಭೂಮಿಯಲ್ಲಿ ಕೃಷಿ ಭೂಮಿ ಎಷ್ಟು ಮುಳುಗಡೆಯಾಗುತ್ತಿದೆ, ಕೃಷಿಯೇತರ ಭೂಮಿ ಎಷ್ಟು ಮುಳುಗಡೆಯಾಗುತ್ತಿದೆ ಎನ್ನುವುದರ ಬಗ್ಗೆ ಸರ್ಕಾರ ಖಚಿತವಾದ ಮಾಹಿತಿಯನ್ನು ಇವತ್ತಿಗೂ ಕೂಡ ಈ ಸದನಕ್ಕೆ ಕೊಟ್ಟಿಲ್ಲ.

2.10 ಪಿ.ಎಂ.

ಅಂದರೆ ಕೃಷಿ ಭೂಮಿ ಎಷ್ಟು ಮುಳುಗಡೆಯಾಗುತ್ತದೆ, ಕೃಷಿಯೇತರ ಭೂಮಿ ಎಷ್ಟು ಮುಳುಗಡೆಯಾಗುತ್ತದೆ ಎನ್ನತಕ್ಕಂಥಾದ್ದು. ಇನ್ನೊಂದು ವಿಷಯವೆಂದರೆ ಮುಳುಗಡೆ ಆಗತಕ್ಕಂಥ ಭೂಮಿಯ ಬಗ್ಗೆಯೇ ವಿವಾದ ಇದೆ. 576 ಎಕರೆ ಎಂದು ಇವರು ಹೇಳುತ್ತಾರೆ, 576 ಎಕರೆಗಿಂತ ಹೆಚ್ಚು ಮುಳುಗಡೆಯಾಗಿದೆ ಎಂದು ರಾಯಚೂರು